# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗ

## ಚೌಡೇಶ್ವರಿ ವಾರ್ಡ್ ನಂ-02ರಲ್ಲಿ ದಿನಾಂಕ: 04-09-2021. ರಂದು ನಡೆದ ಸಮಿತಿ ಸಭಾ ನಡವಳಿ.

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ.ಅಶೋಕ್ ಪಾಟಿಲ್ ನೊಡಲ್ ಅಧಿಕಾರಿಗಳು.
2. ಶ್ರೀ.ಚಂದ್ರಕಾಂತ್‌ರಾಜ್ ಪಿ.ಎ ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿ.
3. ಶಶಿಕುಮಾರ್ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ
4. ಶ್ರೀ.ನಂದಶ್ರಿ, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ-02.
5. ಶ್ರೀ. ಲಿಂಗರಾಜು ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ-02.

ವಾರ್ಡ್ ಸಮಿತಿಯ ಪ್ರಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ನೊಡೆಲ್ ಅಧಿಕಾರಿಗಳು ಹಾಗೂ ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ನೊಡೆಲ್ ಅಧಿಕಾರಿಗಳನ್ನು ಕೋರಲಾಯಿತು.

1. ಚೌಡೇಶ್ವರಿ ವಾರ್ಡ್ ನಂ -02ರ ವ್ಯಾಪ್ತಿಯಲ್ಲಿರುವ ವಿಜಯ ಜ್ಯೋತಿ ಶಾಲೆ ಯಿಂದ ಜ್ಞಾನ ಭಾರತಿ ಶಾಲೆಯ ವರೆಗೆ ಬಿ,ಡಬ್ಲ್ಯೂ.ಎಸ್.ಎಸ್.ಬಿ ಒಳಚರಂಡಿ ಮೈನ್ ಲೈನ್ ಹಾಳಾಗಿರುವ ಬಗ್ಗೆ ಸಭೆಗೆ ಶ್ರೀನಿವಾಸ ರವರು ಸಭೆಗೆ ತಿಳಿಸಿದರು.

2. ವಾರ್ಡ್ ನಂ -02ರ ವ್ಯಾಪ್ತಿಯಲ್ಲಿರುವ ಕಾಮಾಕ್ಷಮ್ಮ ಬಡಾವಣೆಯಲ್ಲಿನ ವರದರಾಜು ಮನೆ ರಸ್ತೆಯ ಹತ್ತಿರ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕುಡಿಯುವ ನೀರಿನ ಪೂರೈಕೆ ಸಮರ್ಪಕವಾಗಿ ಮಾಡುತ್ತಿರುವುದಿಲ್ಲ ವೆಂದು ಸಭೆಗೆ ಶ್ರೀನಿವಾಸ ರವರು ದೂರನ್ನು ಸಲ್ಲಿಸಿದರು.

3. ವಾರ್ಡ್‌ಗಳ ವ್ಯಾಪ್ತಿಯಲ್ಲಿ ಕೊವಿಡ್ -19 ರ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲು ಹಾಗೂ ವ್ಯಾಕ್ಸಿನ್ ಹಾಕಿಸಿಕೊಳ್ಳುವುದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

4. ವಾರ್ಡ್‌ನ ವ್ಯಾಪ್ತಿಯಲ್ಲಿರುವ ಯಲಹಂಕ ಒಲ್ಡ್ ಟೌನ್‌ನ ಕೋಟೆ ಬೀದಿಯಲ್ಲಿ ದೀಪ ಉರಿಯುತ್ತಿರುವುದಿಲ್ಲ ಎಂದು ಸಾರ್ವಜನಿಕರು ದೂರು ನೀಡಿದ್ದು, ಸದರಿ ದೂರಿನನ್ವಯ ಸ್ಥಳ ಪರಿಶೀಲನೆ ಮಾಡಿ ಬೀದಿ ದೀಪ ರಿಪೇರಿ ಮಾಡಿಸಿಕೊಡಲು ನೊಡೆಲ್ ಅಧಿಕಾರಿಗಳು ಸೂಚಿಸಿದರು.

5. ವಾರ್ಡ್‌ಗಳ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತುಗಳನ್ನು ಸಮರ್ಪಕವಾಗಿ ಸಂಗ್ರಹಣೆ ಹಾಗೂ ನಿರ್ವಹಣೆ ಮಾಡುವಂತೆ ಸಂಬಂಧಿಸಿದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನೊಡೆಲ್ ಅಧಿಕಾರಿಗಳು ಸಭೆಯಲ್ಲಿ ಸೂಚಿಸಿದರು.

6. ವಾರ್ಡ್‌ನ ವ್ಯಾಪ್ತಿಯಲ್ಲಿನ ಶಾಲಾ ಕಾಲೇಜುಗಳನ್ನು ಸ್ವಚ್ಛಗೊಳಿಸಿ ಸ್ಯಾನಿಟೈಸ್ ಮಾಡುವಂತೆ ಸಭೆಯಲ್ಲಿ ಸಾರ್ವಜನಿಕರು ಕೋರಿದ್ದು, ಅದರಂತೆ ಶಾಲಾ ಪ್ರಾರಂಭವಾಗಿರುವ ಹಿನ್ನಲೆಯಲ್ಲಿ ವಾರ್ಡ್‌ಗಳ ವ್ಯಾಪ್ತಿಯಲ್ಲಿ ಶಾಲಾ ಕಟ್ಟಡಗಳನ್ನು ಸಮರ್ಪಕವಾಗಿ ಸ್ವಚ್ಛಗೊಳಿಸಿ ಸ್ಯಾನಿಟೈಸ್ ಮಾಡುವಂತೆ ಸಭೆಯಲ್ಲಿ ತಿರ್ಮಾನಿಸಲಾಯಿತು.

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ನೋಡೆಲ್ ಅಧಿಕಾರಿಗಳು ಸಭೆಯಲ್ಲಿ ಸೂಚಿಸಿದರು. ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾದನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

4/9/2021

ಕಾರ್ಯದರ್ಶಿಗಳು/ ಸಹಾಯಕ ಅಭಿಯಂತರರು
ವಾರ್ಡ್ ಕಮಿಟಿ, ವಾರ್ಡ್ ನಂ. 02(ಚೌಡೇಶ್ವರಿ)

04/09/2021

ವಾರ್ಡ್‌ನ ನೋಡಲ್ ಅಧಿಕಾರಿಗಳು
ವಾರ್ಡ್ ಕಮಿಟಿ, ವಾರ್ಡ್ ನಂ. 02(ಚೌಡೇಶ್ವರಿ)

ಪ್ರತಿಯನ್ನು:

ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳ ಮಾಹಿತಿಗಾಗಿ.

1. ಶ್ರೀ.ಅಶೋಕ್ ಪಾಟಿಲ್ ನೋಡಲ್ ಅಧಿಕಾರಿಗಳು.

## ಅಧಿಕಾರಿಗಳ ಮಾಹಿತಿಗಾಗಿ.

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಮಾಹಿತಿಗಾಗಿ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಮಾಹಿತಿಗಾಗಿ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರ ಮಾಹಿತಿಗಾಗಿ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ರವರ ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ವಿಭಾಗ ಬಿ.ಬಿ.ಎಂ.ಪಿ ರವರ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ಯಲಹಂಕರವರ ಸೂಕ್ತ ಕ್ರಮಕ್ಕಾಗಿ.